# ಗೋಧಿ ದಾಸ್ತಾನು ಕಡಿತ

ದೇಶದಲ್ಲಿ ಗೋಧಿ ಸಂಗ್ರಹ ಹಿಂದಿನ ವರ್ಷಕ್ಕಿಂತ ಶೇ 13ರಷ್ಟು ಕಡಿಮೆಯಾಗಿರುವುದಾಗಿ ವರದಿಯಾಗಿದೆ. ಇದೇ ಮಾರ್ಚ್ ಆದಿಯಲ್ಲಿ 16.86 ಮಿ. ಟನ್‌ಗಳಷ್ಟು ಗೋಧಿ ದಾಸ್ತಾನು ಇದ್ದು, ಕನಿಷ್ಟ ದಾಸ್ತಾನು 7.46 ಮಿ. ಟನ್‌ಗಳಿಗಿಂತ ಅಧಿಕವಾಗಿದೆ. ಖಾಸಗಿ ಸಂಗ್ರಹವನ್ನು ಹೊರತಯು ಪಡಿಸಿದರೆ ಎಪ್ರಿಲ್ ಆರಂಭಕ್ಕೆ 14 ಮಿ. ಟನ್ ಗೋಧಿ ಸಂಗ್ರಹವಿರಲಿದೆ ಎಂದು ಲೆಕ್ಕಾಚಾರ ಮಾಡಲಾಗಿದೆ.

ಈ ವರ್ಷ 30 ಮಿ. ಟನ್ ಗೋಧಿ ಎತ್ತುವರಿ ನಡೆಸುವ ಗುರಿಯಿರಿಸಲಾಗಿದ್ದರೂ, ಸುಮಾರು 28 ಮಿ. ಟನ್ ಸಂಗ್ರಹವಾಗುವ ನಿರೀಕ್ಷೆಯಿದೆ. ಹೀಗೆ ಕೇಂದ್ರ ಗೋದಾಮುಗಳಲ್ಲಿ ಸುಮಾರು 35 ಮಿ. ಟನ್‌ಗಳಷ್ಟು ಗೋಧಿ ಸಂಗ್ರಹವಾಗುವ ಅಂದಾಜು ಮಾಡಲಾಗಿದ್ದು, ಸಾರ್ವಜನಿಕ ವಿತರಣೆಯೂ ಸೇರಿದಂತೆ ಎಲ್ಲಾ ಅವಶ್ಯಕತೆಗಳನ್ನು ಪೂರೈಸಲು ಸಾಕಾಗಬಹುದೆಂದು ಆಶಿಸಲಾಗಿದೆ.